ರಂಗಾಭಟ್ಟನಿಗೆ ಮೊದಲು ಇವನನ್ನು ಚೆನ್ನಾಗಿ ಓದಿಸಿ ಎಂಜಿನಿಯರೋ, ಡಾಕ್ಟರೋ ಮಾಡಬೇಕು ಎಂಬ ಆಸೆಯೇನೋ ಇತ್ತು. ಮಗ ಬೆಂಗಳೂರು ಸೇರಿ ಒಳ್ಳೆ ಸಂಪಾದನೆ ಮಾಡಬೇಕು ಎಂದು ಆಸೆ ಪಟ್ಟಿದ್ದೇನೋ ಹೌದು.

ಆದರೆ, ಅದು ನಾವಂದುಕೊಂಡಂತೆ ಆಗುತ್ತದೆಯೇ? ಗ್ರಾಮಾಧಿದೇವತೆ ಪರಮೇಶ್ವರನ ಮನಸ್ಸಿಗೆ ಬರಲಿಲ್ಲವೆಂದು ಕಾಣುತ್ತದೆ ಎಂದು ರಂಗಾಭಟ್ಟ ಆಗೀಗ ಹೇಳುತ್ತಿರುತ್ತಾನೆ. ಎಷ್ಟೇ ಪ್ರಯತ್ನ ಪಟ್ಟರೂ ಮಗ ಶಂಕ್ರನಿಗೆ ಎಸ್ಸೆಸ್ಸೆಲ್ಸಿ ಪಾಸು ಮಾಡಲು ಕೊನೆಗೂ ಆಗಲೇ ಇಲ್ಲ. ಅಲ್ಲಿಗೆ ಮಗ ಶಂಕ್ರನ ಐಟಿಬಿಟಿ ಉದ್ಯೋಗ, ಡಾಕ್ಟರಾಗುವ ಕನಸು ನೆಗೆದು ಬಿತ್ತು. ಮಗ ಭೋಳೆ ಶಂಕರ ಎಂದು ಸುಮ್ಮನಾಗಬೇಕಾಯಿತು. ಮೊದಮೊದಲು ರಂಗಾಭಟ್ಟನಿಗೆ ಈ ಬಗ್ಗೆ ಬೇಜಾರಾಗಿ ಮನಸ್ಸಿಗೆ ಹಚ್ಚಿಕೊಂಡಿದ್ದರೂ ಕೊಲ್ಲೂರಿನ ಸುಬ್ರಹ್ಮಣ್ಯ ಜೋಯಿಸರಿಂದ ಹಿಡಿದು ಊರಿನ ಸಣ್ಣಲಕ್ಕ್ಮಕ್ಕನವರೆಗೆ ಎಲ್ಲರೂ ತರತರದ ಸಮಾಧಾನ ಹೇಳಿದ್ದರು.

ಈಶ್ವರ ದೇವರಿಗೆ ಅವನ ಪೂಜೆಯೇ ಆಗಬೇಕು ಎಂದು ಕಾಣುತ್ತದೆ. ಎಲ್ಲಾ ಒಳ್ಳೆಯದೇ ಆಗುತ್ತದೆ. ನೀನೇನೂ ಬೇಜಾರು ಮಾಡಿಕೊಳ್ಳಬೇಡ. ದೇವಸ್ಥಾನದ ಅಡಿಕೆ ತೋಟವಂತೂ ಇದ್ದೇ ಇದೆಯಲ್ಲಾ. ಅವನಿಗೇನೂ ಕಡಿಮೆ ಆಗುವುದಿಲ್ಲ ಎಂದು. ರಂಗಾಭಟ್ಟ ಸಮಾಧಾನ ಪಟ್ಟುಕೊಳ್ಳುತ್ತಾ ಆ ವಿಷಯವನ್ನೇ ಕ್ರಮೇಣ ಮರೆತು ಬಿಟ್ಟ. ಅವರೆಲ್ಲಾ ಹೇಳಿದಂತೆ ಆ ದೇವಸ್ಥಾನಕ್ಕೆ ಒಂದು ಎಕರೆ ಅಡಿಕೆ ತೋಟವಿದ್ದದ್ದೇನೋ ನಿಜ. ಆದರೆ, ಅದರ ಕೃಷಿ ಅರ್ಚಕರೇ ಮಾಡಬೇಕು. ರಂಗಾಭಟ್ಟ ದೇವಸ್ಥಾನದ ಪೂಜೆ ಜೊತೆಗೆ ತೋಟದ ಕೃಷಿಗೂ ಹೆಚ್ಚು ಹೆಚ್ಚು ಆಸಕ್ತಿ ವಹಿಸಿದ. ಅಡಿಕೆಗೂ ಒಳ್ಳೆಯ ದರ ಬಂತು. ಅವನು ಆರ್ಥಿಕವಾಗಿ ಗಟ್ಟಿಯಾಗುತ್ತಾ ಬಂದಂತೆ ದೇವರೇ ಎಲ್ಲಾ ಕೊಡುವಾಗ ಕೊಡ್ತಾನೆ ಎಂದುಕೊಳ್ಳುತ್ತಾ ಬಂದ. ಮಗನಿಗೆ ಪೂಜೆಯ ತರಬೇತಿ, ಮಂತ್ರ ಗಿಂತ್ರ ಎಲ್ಲಾ ಚೆನ್ನಾಗಿ ಕಲಿಸಬೇಕು ಎಂದು ನಿರ್ಧರಿಸಿದ. ಶಂಕ್ರ ಅಷ್ಟಿಷ್ಟು ರುದ್ರ, ಗಣಪತಿ ಉಪನಿಷತ್, ಅದೂ ಇದು ಎಲ್ಲ ಮಂತ್ರವನ್ನೇನೋ ಕಲಿತ. ಆದರೆ, ದೇವರ ಪೂಜೆ ಅವನ ಇಷ್ಟದ ವೃತ್ತಿಯಾಗಲಿಲ್ಲ. ಹೋಟೆಲ್‌ನವರು, ಡ್ರೈವರುಗಳು, ಸಣ್ಣಪುಟ್ಟ ಗಾರೆ ಮೇಸ್ತ್ರಿಗಳೇ ಹೆಚ್ಚು ದುಡ್ಡು ಸಂಪಾದನೆ ಮಾಡಿ ಮಜಾ ಮಾಡುತ್ತಾರೆ. ಈ ದೇವಸ್ಥಾನದ ಪೂಜೆ ಅದರ ಮುಂದೆ ಏನೂ ಅಲ್ಲ ಎನಿಸತೊಡಗಿತು. ಜೊತೆಗೆ, ದೇವಸ್ಥಾನದಲ್ಲಿರುವ 75ಕ್ಕೂ ಹೆಚ್ಚು ಸಣ್ಣಪುಟ್ಟ ವಿಗ್ರಹಗಳಿಗೆ ಶಾಸ್ತ್ರೋಕ್ತ ಪೂಜೆ ಮುಗಿಸುವುದೆಂದರೆ ಮೂರು ನಾಲ್ಕು ತಾಸು ಬೇಕಾಗುತ್ತದೆ ಎಂದಾಗ ಅವನ ತಲೆ ಕೆಟ್ಟು ಹೋಯಿತು. ಅದರಲ್ಲೂ ಅದು ಊರೊಟ್ಟು ದೇವಸ್ಥಾನ. ಊರಿನ ಜನ ಹೇಳಿದಂತೆ ಕೇಳಬೇಕು. ಕಾಟಾಚಾರದ ಪೂಜೆ ಮಾಡಿ ಓಡುವಂತಿಲ್ಲ. ಊರಿನ ಜನ ಒಬ್ಬರಲ್ಲಾ ಒಬ್ಬರು ಪೂಜೆಯ ಹೊತ್ತಿಗೆ ಬಂದು ನಿಲ್ಲುತ್ತಾರೆ. ಪೂಜೆಯ ಅನಂತರ ಪ್ರಸಾದ ತೆಗೆದುಕೊಂಡು ಹೋಗುತ್ತಾರೆ. ಈಶ್ವರ ಲಿಂಗ ದೇವಸ್ಥಾನದ ಮೂಲ ದೇವರು ನಿಜ. ಆದರೆ, ಅದಕ್ಕಷ್ಟೇ ಅಭಿಷೇಕ, ಪೂಜೆ ಆದರೆ ಸಾಕಾಗುವುದಿಲ್ಲ; ಉಳಿದ ಎಲ್ಲಾ ಸಣ್ಣಪುಟ್ಟ ದೇವರಿಗೂ ಶಾಸ್ತ್ರೋಕ್ತ ಪೂಜೆ ಆಗಲೇಬೇಕು.

ಯಾಕೆಂದರೆ, ಅವೇ ಊರವರೆಲ್ಲರ ಮನೆ–ಮನೆ ದೇವರು. ಮನೆ ಮನೆ ದೇವರು ಮನೆ–ಮನೆಯಲ್ಲಿರದೆ ಇಲ್ಯಾಕೆ ಬಂದು ಸ್ಥಾಪನೆಯಾಗಿವೆ ಎಂಬುದು ನಿಮ್ಮ ಪ್ರಶ್ನೆಯಾಗಿದ್ದರೆ ಅದೊಂದು ದೊಡ್ಡ ಕಥೆ.

★★★

ಚಂದ್ರಶೇಖರಯ್ಯ ಆ ಊರಿನ ದೊಡ್ಡ ಕುಳ. ಮೊದಲಿಂದಲೂ ಧಾರ್ಮಿಕ ಕುಟುಂಬ. ಅವನ ಅಜ್ಜನ ಕಾಲದಿಂದಲೂ ಮಠಕ್ಕೆ ನಡೆದುಕೊಳ್ಳುತ್ತಾ ಬಂದ ಕುಟುಂಬ. ರಾಮಚಂದ್ರಾಪುರ